8.	ಸಾಮಾನ್ಯ ಗುಂಪು	:ಶೇ.32
9.	ರೂರಲ್ ಕೋಟಾ	:ಶೇ.15
10.	ಸ್ಪೋರ್ಟ್ಸ್ ಕೋಟಾ	: 40 ಸೀಟುಗಳು.
11.	ಎನ್.ಸಿ.ಸಿ ಕೋಟಾ	: 36 ಸೀಟುಗಳು.
12.	ಸ್ಕೌಟ್ಸ್ :ಗೈಡ್ಸ್ ಕೋಟಾ	: 5 ಸೀಟುಗಳು.
13.	ಮಗ:ಮಗಳು(ಸ್ವಾತಂತ್ರ ಹೋರಾಟಗಾರರ ಮಕ್ಕಳಿಗೆ)ಕೋಟಾ	:35 ಸೀಟುಗಳು.
14.	ಸೈನಿಕರ:ಮಾಜಿ ಸೈನಿಕರ ಕೋಟಾ.	:80 ಸೀಟುಗಳು.
15.	ಅಂಗವಿಕಲರ ಕೋಟಾ	:10 ಸೀಟುಗಳು
16.	ಹೊರನಾಡು ಕನ್ನಡಿಗರ ಕೋಟಾ	: 20 ಸೀಟುಗಳು
17.	ಗಡಿನಾಡು ಕನ್ನಡಿಗರ ಕೋಟಾ	: 12 ಸೀಟುಗಳು
18.	ಡಿಪ್ಲೊಮಾ ಕೋಟಾ	:ಶೇಕಡ 5 ಸೀಟುಗಳು.
19.	ಆಂಗ್ಲ ಇಂಡಿಯನ್ ಕೋಟಾ	:1ಸೀಟು
20.	ಪಾರ್ಸಿ ಕೋಟಾ	: 2 ಸೀಟುಗಳು.

ಸರ್ವೋಚ್ಚ ನ್ಯಾಯಾಲಯದ ತೀರ್ಮಾನಕ್ಕೆ ಅನುಸಾರವಾಗಿ ಪ್ರವೇಶ ನಿಯಮಾವಳಿಗಳನ್ನು ರೂಪಿಸಲಾಗಿದ್ದು ಸದರಿ ನಿಯಮಗಳಿಗೆ ಖಾಸಗಿ ಕಾಲೇಜುಗಳು ಬದ್ಧವಾಗಿದೆ.

ಉದ್ಭವಿಸುವುದಿಲ್ಲ.

ವಿಷಯ:- ಬೆಳಗಾವಿ ಜಿಲ್ಲೆಯ ಶ್ರೀ ಕ್ಷೇತ್ರ ಸೋಗಲದಲ್ಲಿ ಚಿಗರಿವನ ಹಾಗೂ ಫಾರೆಸ್ಟ್ ಐ.ಬಿ.ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 269(394)

ಶ್ರೀ ಶಿವಾನಂದ ಎಚ್.ಕೌಜಲಗಿ(ಬೈಲಹೊಂಗಲ)

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಶ್ರೀ ಕ್ಷೇತ್ರ ಸೋಗಲದಲ್ಲಿ ಚಿಗರಿ ವನ ಕಟ್ಟಲಾಗುತ್ತಿರುವ ಸಂಗತಿ ನಿಜವೇ ಹಾಗೂ ಈ ಕೆಲಸವು ಈಗ ಅರ್ಧಕ್ಕೆ ನಿಂತ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಚಿಗರಿ ವನ ಕಟ್ಟುವ ಕೆಲಸವನ್ನು ಇನ್ನು ಎಷ್ಟು ದಿವಸಗಳೊಳಗಾಗಿ ಮುಗಿಸಲಾಗುವುದು?

ಇ) ಹಿಂದಿನ ಅರಣ್ಯ ಮಂತ್ರಿಗಳಾದ ಮಾನ್ಯ ಶ್ರೀ ದೇಶ್‌ಮುಖ್‌ರವರು ಶ್ರೀ ಕ್ಷೇತ್ರ ಸೋಗಲದಲ್ಲಿ ಫಾರೆಸ್ಟ್ ಐ.ಬಿ.ಕಟ್ಟುವ ಸಲುವಾಗಿ ಆದೇಶ ನೀಡಿದ ಪ್ರಕಾರ ಇಲ್ಲಿ ಐ.ಬಿ.ಕಟ್ಟಲು ಸರಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ಎಂ.ಪಿ.ಕೇಶವಮೂರ್ತಿ

(ಅರಣ್ಯ ರಾಜ್ಯ ಸಚಿವರು)

ನಿಜ. ಬಂದಿದೆ.

ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ವಿಶ್ರಾಂತಿ ಗೃಹದ ಕೆಲಸವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ವಿಷಯ:- ಬೆಳಗಾವಿ ಜಿಲ್ಲೆಯಲ್ಲಿ ಗ್ರಂಥಾಲಯ ಪ್ರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನೆ270(395)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ವಯಸ್ಕರ ಶಿಕ್ಷಣ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾ: ಸಂಗೊಳ್ಳಿ ಹಾಗೂ ಸವದತ್ತಿ ತಾ: ಹೊಸವೂರ ಮತ್ತು ಮಲ್ಲೂರ ಗ್ರಾಮಗಳಲ್ಲಿ ಮಂಡಲ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

2) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಬೈಲಹೊಂಗಲ ತಾ: ಸಂಗೊಳ್ಳಿ ಹಾಗೂ ಸವದತ್ತಿ ತಾಲ್ಲೂಕಿನ ಮಲ್ಲೂರ ಗ್ರಾಮಗಳಲ್ಲಿ ಕಟ್ಟಡ ಸಹ ಇದ್ದು ಈ ಕಟ್ಟಡದಲ್ಲಿ ಬೇಗನೆ ಮಂಡಲ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

3) ಸವದತ್ತಿ ತಾಲ್ಲೂಕಿನ ಹೊಸವೂರ ಗ್ರಾಮದಲ್ಲಿ ಮಂಡಲ ಪಂಚಾಯತಿಯವರು ಪುಕ್ಕಟೆಯಾಗಿ ಕಟ್ಟಡ ಕೊಡಲು ಒಪ್ಪಿರುವುದರಿಂದ ಅಲ್ಲಿ ಮಂಡಲ ಗ್ರಂಥಾಲಯವನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪ್ರಭಾಕರ ಎಸ್.ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು)

ಸಂಗೊಳ್ಳಿ ಹಾಗೂ ಹೊಸವೂರ ಗ್ರಾಮಗಳ ಮನವಿಗಳು ಬಂದಿದೆ. ಮಲ್ಲೂರ ಗ್ರಾಮದ ಬಗ್ಗೆ ಸರ್ಕಾರಕ್ಕೆ ಯಾವುದೇ ಮನವಿಗಳು ಬಂದಿಲ್ಲ.

ಈ ವರ್ಷ ಸಂಗೊಳ್ಳಿ ಗ್ರಾಮದಲ್ಲಿ ಗ್ರಂಥಾಲಯ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದ ಎಲ್ಲಾ ಪ್ರದೇಶಗಳನ್ನು ಗಮನದಲ್ಲಿಟ್ಟು ಕೊಂಡು ಎಲ್ಲಾ ಮಂಡಲಗಳಿಗೂ ಸಮಾನಂತರ ಅವಕಾಶ ಕಲ್ಪಿಸಲು, ಹಾಗೂ ಆಯವ್ಯಯದ ಆಧಾರದ ಮೇಲೆ ಹಂತ ಹಂತವಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆ ಇದಾಗಿರುವ ಕಾರಣ ಹೊಸವೂರ ಗ್ರಾಮದಲ್ಲೂ ಈ ಕಾರ್ಯಕ್ರಮವನ್ನು ಆಯವ್ಯಯದನುಕೂಲತೆಗನುಗುಣವಾಗಿ ಅಳವಡಿಸಿಕೊಳ್ಳಲಾಗುವುದು.

ವಿಷಯ:-ಬೈಲಹೊಂಗಲ ತಾಲ್ಲೂಕಿನ ನೇಸರಗಿ ಹಾಗೂ ದೊಡವಾಡ ಸರ್ಕಾರೀ ಪದವೀಪೂರ್ವ ಕಾಲೇಜುಗಳಲ್ಲಿ ವೊಕೇಶನಲ್ ಕೋರ್ಸುಗಳು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 271(396)

ಶ್ರೀ ಶಿವಾನಂದ ಹೆಚ್.ಕೌಜಲಗಿ(ಬೈಲಹೊಂಗಲ)

ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಹಾಗೂ ದೊಡವಾಡ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವೊಕೇಶನಲ್ ಕೋರ್ಸುಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳು ಬಂದಿರುವುದೆ?

ಆ) ಹಾಗಿದ್ದಲ್ಲಿ ಅಲ್ಲಿ ವೋಕೇಶನಲ್ ಕೋರ್ಸುಗಳನ್ನು ಪ್ರಾರಂಭಿಸಲು ಎಲ್ಲಾ